ಮತ್ತು ದನಕರುಗಳಿಗೆ ಮದ್ದು ಮಾಡುವುದರಲ್ಲಿ ಆ ಸುತ್ತಿಗೆ ಹೆಸರಾದವನು. ಗಿರಿಂಡೆಗುಡ್ಡ, ಬುಡ್ಡನಕಟ್ಟೆ, ಕುರಿಗೂಡು ಹಾಗೂ ತನ್ನ ಹಟ್ಟಿ ಇವಿಷ್ಟೆ ಅವನ ಜಗತ್ತು. ಹಟ್ಟಿಯ ಯಾರ ಮನೆಬಾಗಿಲಿಗೂ ಹೋದವನಲ್ಲ! ಹಟ್ಟಿಯಾಚೆಗೆ ಹೋಗುವುದೆಂದರೆ, ಅವನನ್ನು ನೀರಿನಿಂದ ಆಚೆಗೆ ತಗೆದ ಮೀನಿನಂತಾಗುತ್ತಿದ್ದ! ಒಬ್ಬರ ಮನನೋಯುವಂತೆ ಮಾತನಾಡಿದವನೂ ಅಲ್ಲ! ಕೊನೆಗೆ ದನ-ಕುರಿ ಮೇಕೆಗಳ ಮೇಲೂ ಕೈ ಎತ್ತಿದವನಲ್ಲ! ಇದೆಲ್ಲವೂ ಅವನಿಗೆ ಅಪ್ಪ ಗಿರಿಗೌಡನಿಂದಲೇ ಬಂದದ್ದು. ಗಿರಿಗೌಡ ಹೇಳಿಕೊಟ್ಟದ್ದನ್ನೇ ಪಾಲಿಸುತ್ತಾ ಶ್ರದ್ಧೆ ಮತ್ತು ಶ್ರಮವಹಿಸಿ ಬಾಳುವೆ ಮಾಡುತ್ತಿದ್ದ. ಎಂಥದ್ದೇ ಕಠಿಣ ಸಂದರ್ಭ ಬಂದರೂ ಅಸತ್ಯದ ಹಾದಿ ತುಳಿದವನಲ್ಲ. ಇದೆಲ್ಲವನ್ನೂ ಬಲ್ಲವರಾಗಿದ್ದ ಹಟ್ಟಿಯವರು 'ನಮ್ಮ ಗೊಲ್ಲಾಳ್ವಿಕೆಯಲ್ಲೇ ಇವನು ವಿಚಿತ್ರವಾದವನು ಕಣ್ರಯ್ಯಾ! ಒಬ್ಬರಿಗೆ ಒಳ್ಳೇದು ಮಾಡೋಕೆ ಒಂದುಪಕ್ಷ ದೇವರು ಬೇಕಾದರೆ ಸುಳ್ಳು ಹೇಳಬಹುದು. ಆದರೆ ನಮ್ಮ ಸಣ್ಣತಿಮ್ಮಯ್ಯ ಮಾತ್ರ ಎಂದಿಗೂ ಸುಳ್ಳು ಹೇಳೋನಲ್ಲ! ಯಾರೊಂದಿಗೂ ತಟವಟ ಮಾಡೊನಲ್ಲ!' ಎಂದು ಎದೆಯುಬ್ಬಿಸಿ ಹೇಳುತ್ತಿದ್ದರು.

ಒಂದು ಸಲ ಅವರ ಕುರಿಗೂಡಿನಲ್ಲಿ ಗಬ್ಬವಾಗಿದ್ದ ಕುರಿಯೊಂದು ಹೆಣ್ಣುಕುರಿಯೊಂದನ್ನು ಈದು ಏನೋ ಕಾರಣಕ್ಕೆ ಸತ್ತುಹೋಯಿತು. ಆಗ ಸಣ್ಣತಿಮ್ಮಯ್ಯ ಆ ಮರಿಯನ್ನು ತನ್ನ ಕೂಸೆಂದೆ ತಿಳಿದು ಸಾಕಿದ. ಆ ತಬ್ಬಲಿ ಮರಿಗೆ ಬೇರೆ ತಾಯಿಗುರಿಗಳ ಹಾಲು ಕುಡಿಸೋದನ್ನು ಮಾಡುತ್ತಿದ್ದ. ಉಂಬುವಾಗಲೂ ಆ ಕುರಿಮರಿಯನ್ನು ತನ್ನ ಎದೆಗವಿಸಿಕೊಂಡು ಉಂಬೋನು. ಕುರಿ ಮೇಯಿಸಲು ಗಿರಿಂಡೆಗುಡ್ಡ, ತ್ಯಾಗದಕೊಳ ಕಡೆಗೆ ಹೋಗುವಾಗಲೂ ಆ ಕುರಿಮರಿಯನ್ನು ತನ್ನೆದೆಗೆ ಆನಿಸಿಕೊಂಡು ಹೋಗುತ್ತಿದ್ದ. ಆ ಮರಿಕುರಿ ಬೆಳ್ಳಗಿದ್ದುದ್ದರಿಂದ 'ಬಿಳಿಕುರಿ' ಎಂದು ಅದನ್ನು ಕರೆಯುತ್ತಿದ್ದ. ಅದೂ ಹಾಗೆಯೇ! ಇತರ ಕುರಿಮರಿಗಳ ಜೊತೆ ಸೇರದೆ ಯಾವಾಗಲೂ ಸಣ್ಣತಿಮ್ಮಯ್ಯನ ಹಿಂದೆಯೇ ಸುತ್ತುವರಿಯುತ್ತಿತ್ತು. ಕುರಿಗಳ ಜೊತೆ ಮೇಯುವಾಗಲೂ ಇವನನ್ನು ನೋಡಿದ ಕೂಡಲೇ ಓಡೋಡಿ ಬಂದು ಅವನ ಉದ್ದಕ್ಕೂ ಮುಂಗಾಲುಗಳಿಂದ ಎಗರಿ ಸಣ್ಣತಿಮ್ಮಯ್ಯನ ಮುಖವನ್ನು ತನ್ನ ಮೂತಿಯಿಂದ ಸವರುತ್ತಿತ್ತು. ಬಿಳಿಕುರಿ ಅವನಿಗೆ ಅಷ್ಟೊಂದು ಕೈಪಾಟವಾಗಿತ್ತು. ಇದೆಲ್ಲವನ್ನೂ ನೋಡುತ್ತಿದ್ದ ಗಿರಿಗೌಡ ತನ್ನ ಮಗನಿಗೆ 'ಬೇಡ ಕಣ್ಲ ಸಣ್ಣೋನೆ, ಈಟೊಂದು ಹಚ್ಕೊಬ್ಯಾಡ ಕಣ್ಲ.. ಒಳ್ಳೇದಲ್ಲ. ಈಗೇನೊ ನೀನು ಹರೆದೋನು, ಇವೆಲ್ಲ ತಿಳಿಯಾಕಿಲ್ಲ! ನನ್ನಂಗಾದಾಗ ನಿನಗೆ ಎಲ್ಲಾ ತಿಳೀತತೆ. ಅಲ್ಲಿಗಂಟ ಹಿಂಗೆ..' ಎಂದು ಆಗಾಗ ಯಾವುದೊ ನಿಗೂಢವನ್ನು ಹೇಳುವವನಂತೆ ಎಚ್ಚರಿಸೋನು. ಆದರೂ ಸಣ್ಣತಿಮ್ಮಯ್ಯ ಅಪ್ಪನ ಮಾತನ್ನು ಕಿವಿಮೇಲೆ ಹಾಕಿಕೊಳ್ಳುತ್ತಿರಲಿಲ್ಲ.

ಅದೊಂದು ದಿನ ಸಣ್ಣತಿಮ್ಮಯ್ಯ ಕುರಿಮೇಯಿಸಲು ಗಿರಿಂಡೆಗುಡ್ಡಕ್ಕೆ ತಾನು ಹೋಗದೆ ಅಪ್ಪ ಗಿರಿಗೌಡನನ್ನೇ ಕಳುಹಿಸಿದ್ದ. ಸಂಜೆ ಸೂರ್ಯ ಕಂದುತ್ತಿರುವ ಹೊತ್ತಿಗೆ ಗಿರಿಗೌಡ ತನ್ನ ಕುರಿಗಳಿಗೆ ನೀರು ಕುಡಿಸಲು ಬುಡ್ಡನಕಟ್ಟೆಗೆ ಹಿಂಡಿನೊಂದಿಗೆ ಬಂದ. ಆ ಹಿಂಡಿನಲ್ಲಿ ಸಣ್ಣತಿಮ್ಮಯ್ಯನ ಪ್ರೀತಿಪಾತ್ರ ಬಿಳಿಕುರಿಯೂ ಇತ್ತು. ಬುಡ್ಡನಕಟ್ಟೆ ನೀರನ್ನು ಬಿಟ್ಟರೆ ತಮ್ಮ ಕುರಿಗಳು ಇನ್ನಾವ ಗಡ್ಡೆಯಲ್ಲೂ ನೀರು ಕುಡಿಯುವುದಿಲ್ಲವೆಂಬುದು ಅವನಿಗೆ ಗೊತ್ತಿತ್ತು. ಅಂದು ಅದೇ ನೀರಿನಗಡ್ಡೆ ಬಳಿಗೆ ಪಕ್ಕದ ಅಜ್ಜಪ್ಪನಹಟ್ಟಿಯ ಈರಪ್ಪನೂ ಕುರಿಗಳಿಗೆ ನೀರುಕುಡಿಸಲು ಬಂದಿದ್ದ. ಅಲ್ಲೇ ಅವರಿಬ್ಬರ ಕುರಿಗಳು ಬೆರೆತುಕೊಂಡವು. ಕುರಿಗಾಹಿಗಳಲ್ಲಿ ಕಂಡೂ ಕಾಣದಂತಹ ಒಂದು ಕಟ್ಟುಪಾಡು ಇರುತ್ತದೆ. ಒಂದು ಕುರಿಗೂಡಿನವರು ಕುರಿಗಳಿಗೆ ನೀರು ಕುಡಿಸುವ ನೀರಿನಗಡ್ಡೆಗಳ ಹತ್ತಿರ ಬೇರೆ ಕುರಿಗಾಹಿಗಳು ಹೋಗುವ ಹಾಗಿಲ್ಲ! ಇದನ್ನು 'ಬಾರ್‌ಕಟ್' ಎಂದು ಕರೆಯುತ್ತಿದ್ದರು. ಇದನ್ನು ನೋಡಿಯೇ ಗಿರಿಗೌಡ ಈರಪ್ಪನ ಕುರಿಗಳನ್ನು ನೋಡಿ 'ಯಾಕೆ ಈರಪ್ಪ ನಮ್ಮ ಬಾರ್‌ಕಟ್ಟೆಗೆ ಕುರಿಗಳನ್ನು ಹೊಡೆದುಕೊಂಡು ಬಂದೆ? ಯಾಕೆ ನಿಮ್ಮದೇ ಚಿಕ್‌ಕಟ್ಟೆ ಇಲ್ಲವೆ?' ಎಂದು ಕೇಳಿದ. ಅಜ್ಜಪ್ಪನ ಹಟ್ಟಿಯ ಈರಪ್ಪ ಸ್ವಲ್ಪ ಗಾಳಿಗಂಟಲಿನ ಮನುಷ್ಯ. ನಯ-ನಾಜೋಕುಗಳು ಅವನಿಂದ ಮಾರುದೂರ! ಹಿರಿಯರು-ಕಿರಿಯರು ಅನ್ನದೆ ಮಾತಿಗೆ ಮಾತು ಕೊಡೋದು, ಹಿಂದು-ಮುಂದು ನೋಡದೆ ಧ್ವನಿಯೇರಿಸಿ ಮಾತಾಡೋದು ಅವನ ಚಾಳಿ. 'ಯಾಕೆ ಅಂಗಾಡ್ತಿ ಗಿರಿಗೌಡ. ಏನೋ